(ಇಂದು ದಿಃ 12-11-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು)

**ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ-**

ಮೃತ ಅಮೃತಪ್ಪ ನನ್ನ ತಂದೆ, ಇವರಿಗೆ ನಾನು, 2ನೇ ಪ್ರತಿವಾದಿ ಹಾಗೂ ವಾದಿ ಮಕ್ಕಳು ಎನ್ನುವುದು ಸರಿ. ದಾವಾ ಸ್ವತ್ತುಗಳು ತಂದೆಯ ಆಸ್ತಿ ಎನ್ನುವುದು ಸರಿ. ತಂದೆ 1983ನೇ ಇಸವಿಯಲ್ಲಿ ಮರಣ ಹೊಂದಿರುತ್ತಾರೆ. ಆ ಸಮಯದಲ್ಲಿ ನಾವು ಮೂರು ಜನ ಚಿಕ್ಕವರಿದ್ದೆವು. ತಂದೆ ಮರಣ ಹೊಂದಿದ ನಂತರ ನಮ್ಮ ಮೂರು ಜನರ ಹೆಸರಿಗೆ 83ರಲ್ಲಿಯೇ ಖಾತೆ ಆಗಿರುತ್ತದೆ ಎನ್ನುವುದು ಗೊತ್ತಿರುವುದಿಲ್ಲ. ನಮ್ಮ ಆಸ್ತಿಯನ್ನು ಭಾಗಮಾಡಿಕೊಂಡ ನಂತರ ಖಾತೆ ಮಾಡಿಕೊಂಡಿರುತ್ತೆವೆ. ಭಾಗ ಮಾಡಿಕೊಂಡ ಬಗ್ಗೆ ದಾಖಲಾತಿ ಮಾಡಿಕೊಂಡಿರುವುದಿಲ್ಲ.

2. ಖಾತೆ ಮಾಡಿಸುವ ಸಮಯದಲ್ಲಿ ವಾದಿಯ ಅನುಮತಿಯನ್ನು ಪಡೆದುಕೊಂಡಿರುವುದಿಲ್ಲ. ವಾದಿಗೆ ಪ್ಲಾಟನ್ನು ಖರೀದಿಸಿ ಕೊಟ್ಟಿರುತ್ತೆವೆ ಎಂದು ಹೇಳಿರುತ್ತಿರಾ ಎಂದರೆ ಯಾವಾಗ ಖರೀದಿಸಿರುತ್ತಿರಾ ಎಂದರೆ ಸಾಕ್ಷಿ ತನಗೆ ದಿನಾಂಕ ನೆನಪಿರುವುದಿಲ್ಲ ಎನ್ನುತ್ತಾರೆ. ಖರೀದಿಸಿದ ಬಗ್ಗೆ ದಾಖಲೆ ಹಾಜರುಪಡಿಸಿರುವುದಿಲ್ಲ. ವಾದಿಗೆ ಯಾವುದೇ ಪ್ಲಾಟನ್ನು ಕೊಟ್ಟಿರುವುದಿಲ್ಲ. ಕೊಟ್ಟಿರುತ್ತೆನೆ ಎಂದು ಸುಳ್ಳು ಹೇಳಿರುತ್ತೆನೆ ಎಂದರೆ ಸರಿಯಲ್ಲ. ವಾದಿಗೆ ಬಂಗಾರವನ್ನು ಕೊಟ್ಟಿರುತ್ತೆನೆ ಎಂದು ಸುಳ್ಳು ಹೇಳುತ್ತಿದ್ದೆನೆಂದರೆ ಎಂದರೆ ಸರಿಯಲ್ಲ.

3. 5 ಎಕರೆಯನ್ನು 5ನೇ ಪ್ರತಿವಾದಿಗೆ ಮಾರಾಟ ಮಾಡುವಾಗ ವಾದಿಯ ಸಹಿಯನ್ನು ತೆಗೆದುಕೊಂಡಿರುತ್ತಿರಾ ? ಉತ್ತರಃ ಸಹಿ ತೆಗೆದುಕೊಂಡಿರುತ್ತೆವೆ. ವಾದಿಗೆ ಗೊತ್ತಿಲ್ಲದ ಹಾಗೆ ಸರ್ವೆ ನಂಬರಃ 21 ಅನ್ನು ಮಾರಾಟ ಮಾಡಿರುತ್ತೆವೆ ಎಂದರೆ ಸರಿಯಲ್ಲ. ನನ್ನ ಹೆಂಡತಿಗೆ ವಾದಿಗೆಮೋಸ ಮಾಡುವ ಉದ್ದೇಶದಿಂದ ಸರ್ವೆ ನಂಬರ ಃ 21 ರಲ್ಲಿ ಉಳಿದ 16 ಎಕರೆಯನ್ನು ದಾನ ಪತ್ರ ಮಾಡಿರುತ್ತೆನೆ ಎನ್ನುವುದು ಸರಿಯಲ್ಲ. ಖರೀದಿ ಪತ್ರ ಹಾಗೂ ದಾನ ಪತ್ರ ವಾದಿಗೆ ಬದ್ಧ ಪಡಿಸುವುದಿಲ್ಲ ಎನ್ನುವುದು ಸರಿಯಲ್ಲ. ವಾದಿಗೆ ದಾವಾ ಸ್ವತ್ತುಗಳಲ್ಲಿ ಸಮಾನ ಹಿಸ್ಸೆ ಹಕ್ಕು ಇದ್ದು ಈಗ ಹಿಸ್ಸೆ ಕೋಡಬೇಕಾಗುತ್ತದೆ ಎಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆಂದರೆ ಸರಿಯಲ್ಲ. ವಾದಿ, ನನ್ನ ಹಾಗೂ 2ನೇ ಪ್ರತಿವಾದಿಯ ಮಧ್ಯೆ ಇದುವರೆಗೂ ಯಾವುದೇ ವಿಬಾಗ ಆಗಿರುವುದಿಲ್ಲ ಹಾಗಾಗಿ ಮೂರನೇಯ ಒಂದು ಬಾಗ ಹಿಸ್ಸೆ ಹಕ್ಕು ಇರುತ್ತದೆ

ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ. ಇದೆ.

**1ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಕಲಬುರಗಿ.**